## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.379-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ವೆಂಕಟೇಶ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-03-2023. |

**ಪಾಟೀ ಸವಾಲುಃ ಶ್ರೀ ಹೆಚ್.ಎನ್.ಎಂ ವಕೀಲರಿಂದಃ**

1 ನೇ ಪ್ರತಿವಾದಿ ಸ್ವತ್ತನ್ನು ಕೊಂಡುಕೊಳ್ಳುವಂತೆ ನನ್ನ ಬಳಿ ಬಂದಿದ್ದರಿಂದ ಪರಿಚಿತರಾಗಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ತಾಯಿ ನನ್ನ ಬಳಿ ಬಂದಿದ್ದರು. ಸರ್ವೇ ನಂ.230/4 ರ ಬಾಬ್ತು 40X66 ಅಡಿ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ . ಸರ್ವೇ ನಂ.230/4 ರಲ್ಲಿ ಪ್ರತಿವಾದಿಗಳಿಗೆ ಸೇರಿದ 0.13 ಗುಂಟೆ ಸ್ವತ್ತು ಇರುತ್ತದೆ. ಸರ್ವೇ ನಂ.230/4 ರಲ್ಲಿ 0.13 ಗುಂಟೆ ಪೈಕಿ ನನಗೆ ಕ್ರಯದ ಕರಾರು ಆಗಿರುವ 40X66 ಅಡಿ ಸ್ವತ್ತು 0.13 ಗುಂಟೆ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತದೆ. ಸರ್ವೇ ನಂ.230/4 ರ ವಿಸ್ತೀರ್ಣ 0.13 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಅನ್ಯಕ್ರಾಂತ ಆಗಿರುವುದಿಲ್ಲ, ಆದರೆ ಪ್ರತಿವಾದಿಗಳು ಸ್ವತ್ತನ್ನು ಅಳತೆ ಮಾಡಿ ನನಗೆ ತೋರಿಸಿರುತ್ತಾರೆ.

2.1 ನೇ ಪ್ರತಿವಾದಿ ಆತನ ತಮ್ಮ ಕಾರ್ಖಾನೆಯಲ್ಲಿ ಬಿದ್ದು ಸೊಂಟ ಮುರಿದು ಹೋಗಿರುವುದರಿಂದ ಆತನ ಚಿಕಿತ್ಸೆ ವೆಚ್ಚಕ್ಕಾಗಿ ಹಣದ ಅವಶ್ಯಕತೆ ಇದೆ ಎಂದು ನನ್ನ ಬಳಿ ಬಂದಿರುತ್ತಾರೆ. ನನ್ನ ನೋಟಿಸ್ ನಲ್ಲಾಗಲಿ, ನಿಪಿ-9 ರಲ್ಲಾಗಲಿ 1 ನೇ ಪ್ರತಿವಾದಿ ತಮ್ಮನ ಸೊಂಟದ ಚಿಕಿತ್ಸೆಯ ವೆಚ್ಚಕ್ಕಾಗಿ ಹಣದ ಪಡೆಯಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನಿಪಿ-9 ಅನ್ನು ನಾನು ಬರೆಸಿರುವುದಿಲ್ಲ ಪ್ರತಿವಾದಿಗಳೇ ಬರೆಸಿ ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನಿಪಿ-9 ಅನ್ನು ಬರೆಸುವ ವೇಳೆ ನಂಜನಗೂಡಿನಲ್ಲಿ ಇದ್ದೆನು. ನಿಪಿ-1 ಅನ್ನು ತರಲು ನಾನೇ ಪ್ರತಿವಾದಿಗಳಿಗೆ ರೂ.1,000/- ಗಳನ್ನು ನೀಡಿರುತ್ತೇನೆ. ನಿಪಿ-9 ಅನ್ನು ದಿ.01-04-2011 ರಲ್ಲಿ ಬರೆದುಕೊಡಲಾಗಿರುತ್ತದೆ. ನಿಪಿ-9 ಮೊದಲನೆ ಪುಟದ ಮೊದಲ ಎರಡೂ ಸಾಲುಗಳಿಗೂ, ಆನಂತರದ ಸಾಲುಗಳ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ

ಎಂದರೆ ಸರಿ. ನಿಪಿ-9 ರ ಛಾಪಾಕಾಗದವನ್ನು ಯಾವ ಉದ್ದೇಶಕ್ಕಾಗಿ ತಂದಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನೋಟರಿಯವರಿಗೆ ನಾನು ಹಣ ನೀಡಿದ್ದು, ಅವರ ಬಳಿ ಇದ್ದ ಪತ್ರದಲ್ಲಿ ನನಗೆ ಕ್ರಯದ ಕರಾರು ಪತ್ರವನ್ನು ನನಗೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ಅನ್ನು ಪ್ರತಿವಾದಿಗಳು ಎಂ.ವೆಂಕಟಪ್ಪ ನೋಟರಿ ರವರ ಕಚೇರಿಯಲ್ಲಿ ಬರೆದಿರುತ್ತಾರೆ. ನಿಪಿ-9 ಬಗ್ಗೆ ನನಗೆ ಸಂಪೂರ್ಣ ತಿಳುವಳಿಕೆ ಇರುತ್ತದೆ ಎಂದರೆ ಸರಿ. ನಿಪಿ-9 ಛಾಪಾಕಾಗದವನ್ನು ಅಂದೇ ತೆಗೆದುಕೊಂಡು, ಅಂದೇ ಕ್ರಯದ ಕರಾರ ಪತ್ರವನ್ನು ಬರೆಸಲಾಗಿರುತ್ತದೆ.

3. ನಿಪಿ-9 ರ 4 ನೇ ಖಂಡಿಕೆಯಲ್ಲಿ ಷೆಡ್ಯೂಲ್ ಸ್ವತ್ತಿನಲ್ಲಿ 2 ನೇ ಪಾರ್ಟಿ ರವರೇ ಬಾಡಿಗೆಗೆ ವಾಸವಾಗಿರುವುದರಿಂದ ಇನ್ನೂ ಮುಂದೆ ಖರಿದಿದಾರರು ಎಂದು ಪರಿಗಣಿಸಿ ಅನುಭವಿಸಿಕೊಂಡು ಹೋಗತಕ್ಕದ್ದು ಎಂದು ನಮೂದು ಇದ್ದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳಿಗೆ ರೂ.300/- ಬಾಡಿಗೆ ನೀಡುತ್ತಿದ್ದೆನು, ನಾನು ರೂ.300/- ಗಳನ್ನು ಪ್ರತಿವಾದಿಗಳಿಗೆ ಬಾಡಿಗೆ ನೀಡುತ್ತಿದ್ದ ಸಂಬಂಧ ಯಾವುದೇ ಬರವಣಿಗೆ ಆಗಿರುವುದಿಲ್ಲ, ನನ್ನ ಹಾಗೂ ಪ್ರತಿವಾದಿಗಳ ನಡುವಿನ ಮೌಖಿಕ ಒಪ್ಪಂದದ ಮೇರೆಗೆ ಆ ರೀತಿ ಬಾಡಿಗೆಗೆ ನೀಡುತ್ತಿರುತ್ತೇನೆ ಎಂದು ನುಡಿಯುತ್ತಾರೆ. ನೋಂದಣಿಗೆ ಅವಶ್ಯಕವಾದ ನಕ್ಷೆ ತಯಾರಿಸಲು ಕಾಲಾವಕಾಶ ಬೇಕೆಂದು ನೋಂದಣಾಧಿಕಾರಿಯವರ ಕೆಚೇರಿಯವರ ತಿಳಿಸಿದ್ದರಿಂದ ಪ್ರತಿವಾದಿಗಳು ನನಗೆ ನೋಂದಣಿ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ನಾನು ನಕ್ಷೆ ತಯಾರು ಮಾಡಿಸಲು ಯಾವುದೇ ಅರ್ಜಿ ನೀಡಿರುವುದಿಲ್ಲ, ಆದರೆ ಪ್ರತಿವಾದಿಗಳು ಅರ್ಜಿ ನೀಡಿರುತ್ತಾರೆ. ನಿಪಿ-9 ರ ಖಂಡಿಕೆ 6 ರಲ್ಲಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ಒಂದು ವರ್ಷ ವಾಯಿದೆಯನ್ನು ನಿಗದಿ ಮಾಡಿದ್ದು, ಸದರಿ ಒಂದು ವರ್ಷ ವಾಯಿದೆ ಒಳಗೆ ನಿವೇನಾದರೂ ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಗಳು ಪದೇ ಪದೇ ವಾಯಿದೆ ಕೇಳಿದ್ದರಿಂದ ನಾನು ನೋಟಿಸ್ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ನಿಪಿ-1 ರಲ್ಲಿನ ವೆಂಕಟೇಶ್ ಎಂಬ ಸಹಿ ಯಾರದ್ದು ಎಂಬ ಪ್ರಶ್ನೆಗೆ ಸಾಕ್ಷಿ ತನ್ನದೇ ಎಂದು ಒಪ್ಪಿಕೊಂಡಿದ್ದು, ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿ.07-10-2011 ರಂದು ನಿಪಿ-1 ರಂತೆ ಸ್ಕೆಚ್ ಆದ ನಂತರ ನಾನು ಪ್ರತಿವಾದಿಗಳಿಗೆ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡುವಂತೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ-1 ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿ. ನಿಪಿ-1 ರ ಸ್ಕೆಚ್ ನಾನು ಕ್ರಯಕ್ಕೆ ಪಡೆದ ಸ್ವತ್ತಿಗೆ

ಸಂಬಂಧಿಸಿದಂತೆ ಇದ್ದು, ಆದರೆ ಸರ್ವೆ ನಂಬರ್ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಸರ್ವೆ ನಂಬರ್ ತಪ್ಪಾಗಿದೆ ಎಂದು ನಾನು ಸಂಬಂಧಪಟ್ಟ ಇಲಾಖೆಗೆ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳೇ ನನಗೆ ನಿಪಿ-1 ಅನ್ನು ಮಾಡಿಸಿಕೊಟ್ಟಿರುವುದರಿಂದ ಆಗಿರುವ ತಪ್ಪನ್ನು ಸರಿಪಡಿಸಲು ಜವಾಬ್ದಾರಿ ಅವರದ್ದೇ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ನಾನು ನಿಪಿ-1 ಕ್ಕೆ ಖುದ್ದಾಗಿ ಸಹಿ ಮಾಡಿದ್ದು ಅದರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಗೊತ್ತಿಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ-9 ಅನ್ನು ಪ್ರತಿವಾದಿಗಳು ನನಗೆ ಬರೆದುಕೊಟ್ಟ ಎರಡೂವರೆ ವರ್ಷಗಳ ನಂತರ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡುವಂತೆ ಪ್ರತಿವಾದಿಗಳಿಗೆ ನೋಟಿಸ್ ನೀಡಿರುತ್ತೇನೆ. ನಿಪಿ-4 ಅನ್ನು ನಾನೇ ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದರೆ ಸರಿ. ನಿಪಿ-4 ರ ಷೆಡ್ಯೂಲ್ ಸ್ವತ್ತಿನ ಬಾಬ್ತು ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡುವಂತೆ ನೋಟಿಸ್ ನೀಡಿರುತ್ತೇನೆ ಎಂದರೆ ಸರಿ ನಿಪಿ-4 ಷೆಡ್ಯೂಲ್ ನಲ್ಲಿ ಬೇಗೂರು ಗ್ರಾಮ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೆರಳಚ್ಚಿನ ತಪ್ಪಿನಿಂದ ದೇಬೂರು ಎಂಬುದರ ಬದಲು ಬೇಗೂರು ಎಂದು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರ ಚೆಕ್ಕುಬಂದಿಗೂ ಮತ್ತು ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡೂ ಚೆಕ್ಕುಬಂದಿಗಳು ಒಂದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆದ ಸ್ವತ್ತಿನ ವಿಸ್ತೀರ್ಣ 40X66 ಅಡಿ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ, ಪೂರ್ವಕ್ಕೇ-ಸರ್ಕಾರಿ ಟಿಂಬರ್ ಡಿಪೋ, ಪಶ್ಚಿಮಕ್ಕೇ-ನಂಜಮ್ಮನವರ ಜಮೀನು, ಉತ್ತರಕ್ಕೇ- ನಂಜಮ್ಮನವರ ಜಮೀನು ಹಾಗೂ ದಕ್ಷಿಣಕ್ಕೇ-ಕಾಲುವೆ ಇರುತ್ತದೆ. ನಾನು ಹೇಳುವಂತೆ 1 ನೇ ಪ್ರತಿವಾದಿ ತಮ್ಮನವರಿಗೆ ಪಟ್ಟಾಗಿ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇರುವುದಿಲ್ಲ ನಿಪಿ-9 ಅನ್ನು ನಾನು ಈ ದಾವೆಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತಿವಾದಿಗಳು ನಿಪಿ-9 ರಂತೆ ನನಗೆ ಯಾವುದೇ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಆದರೆ ದಿ.01-10-2015 ರಂದು ಸರ್ವೇ ನಂ.230/6 ಮತ್ತು ಸರ್ವೇ ನಂ.230/34 ರ ಒಟ್ಟು ವಿಸ್ತೀರ್ಣ 0.9 ಗುಂಟೆ ಸಂಬಂಧಪಟ್ಟಂತೆ ಪ್ರತಿವಾದಿಗಳಿಂದ ಅಧಿಕಾರ ಪತ್ರ ಪಡೆದವರು ಶಹನಾಜ್ ಎಂಬುವವರಿಗೆ ನೋಂದಣಿ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕ್ರಯ ಪತ್ರ ನೋಂದಣಿ ಆಗಿರುವುದು ನಿಜ ಆದರೆ ಪ್ರತಿವಾದಿಗಳು ನನಗೂ ಸಹ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ

ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಪ್ರತಿವಾದಿಗಳು ನನಗೆ ನಿಪಿ–9 ರಂತೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದ ಪಕ್ಷದಲ್ಲಿ ನಾನು ಒಂದು ವರ್ಷದ ಒಳಗೆ ಪ್ರತಿವಾದಿಗಳಿಗೆ ನೋಟಿಸ್ ನೀಡುತ್ತಿದ್ದೆ. ಆದರೆ ಪ್ರತಿವಾದಿಗಳು ನನಗೆ ಕ್ರಯ ಕರಾರು ಪತ್ರವನ್ನು ಬರೆದು ಕೊಡದೇ ಇದ್ದರೂ ನಿಪಿ-9 ರಂತೆ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿರುವುದರಿಂದ ದಿ24–11–2013 ರಂದು ನಾನು ಪ್ರತಿವಾದಿಗಳಿಗೆ ನೋಟಿಸ್ ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಪ್ರತಿವಾದಿಗಳಿಗೆ ರೂ.1,00,000/– ಹಣ ನೀಡುವ ಸಮಯ 1 ನೇ ಪ್ರತಿವಾದಿಯ ಪತ್ನಿ, ನೋಟರಿಯವರು ಮತ್ತು ಇಬ್ಬರು ಸಾಕ್ಷಿದಾರರು ಇದ್ದರು. ನಾನು ಹಣ ನೀಡುವ ಸಮಯ ಸಾಕ್ಷಿದಾರರಾದ ದೇಬೂರಿನ ಮಹದೇವನಾಯಕ ಮತ್ತು ಕೋರೆಹುಂಡಿ ಗ್ರಾಮದ ಶಿವಣ್ಣ ರವರು ಇದ್ದರು. ನಿಪಿ–9 ಕ್ಕೆ 1 ನೇ ಪ್ರತಿವಾದಿಯವರ ಪತ್ನಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ದಿ.01–10–2015 ರಂದು ಪ್ರತಿವಾದಿಗಳಿಂದ ಅಧಿಕಾರ ಪತ್ರ ಪಡೆದವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದ ಶಹನಾಜ್ ರವರನ್ನು ಈ ದಾವೆಯ ಪಕ್ಷಕಾರನನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಶಹನಾಜ್ ರವರನ್ನು ಈ ದಾವೆಯ ಪಕ್ಷಕಾರಳನ್ನಾಗಿ ಮಾಡಲು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ಇದೆಯೇ ಇಲ್ಲವೇ ಎಂಬುದರ ಬಗ್ಗೆ ಪರಿಶೀಲನೆ ಮಾಡಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ಯಾವುದೇ ತಕರಾರು ಇರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಗಳು ಸದರಿ ಮನೆಯನ್ನು ಕೆಡವಿ ನನ್ನ ಪತ್ನಿ ಮತ್ತು ಮಕ್ಕಳನ್ನು ಹೊರಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಮನೆಯನ್ನು ಕೆಡವಿ ನನ್ನ ಪತ್ನಿ ಮತ್ತು ಮಕ್ಕಳನ್ನು ಹೊರಹಾಕಿದ ಬಗ್ಗೆ ನಾನು ಯಾವುದೇ ದೂರು ನೀಡಿರುವುದಿಲ್ಲ. ಮನೆಯನ್ನು ಕೆಡವಿದ ಸಮಯ ಯಾವುದಾದರೂ ಭಾವ ಚಿತ್ರವನ್ನು ತೆಗೆದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಆ ಸಮಯ ನಾನು ಕರ್ತವ್ಯದಲ್ಲಿ ಇದ್ದು ನನ್ನ ಪತ್ನಿಗೆ ಅಧಿಕ ರಕ್ತದ ಒತ್ತಡ ಇರುವುದರಿಂದ ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪತ್ನಿಗೆ ಅಧಿಕ ರಕ್ತದ ಒತ್ತಡ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ–9 ರಂತೆ ಪ್ರತಿವಾದಿಗಳು ನನಗೆ ಯಾವುದೇ ಕ್ರಯದ ಕರಾರು ಪತ್ರವನ್ನು ಬರೆದುಕೊಡದೇ ಇದ್ದರೂ ನಾನು ಪ್ರತಿವಾದಿಗಳು ವಿರುದ್ದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಈಗ ಅಸ್ತಿತ್ವದಲ್ಲಿ ಇರುವುದಿಲ್ಲ. 2015 ರಲ್ಲೇ ಪ್ರತಿವಾದಿ ಕುಟುಂಬದವರಿಂದ ಶಹನಾಜ್ ರವರಿಗೆ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂ.230/4 ರ ಬಾಬ್ತು ಹಕ್ಕು ಪ್ರತಿವಾದಿಗಳಲ್ಲೇ ಉಳಿದಿರುತ್ತದೆ ಎಂದು ನುಡಿಯುತ್ತಾರೆ. ದಿ.01-10-2015 ರ ನಂತರ ಸರ್ವೇ ನಂ.230/4 ಎಂಬ ಸ್ವತ್ತೇ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವಾ ಸ್ವತ್ತು ಪೋಡಾದ ನಂತರ ರೆವೆನ್ಯೂ ದಾಖಲಾತಿಗಳು 1 ನೇ ಪ್ರತಿವಾದಿ ರವರ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಳಿ ನಾನು ಇಂದು ಕೊನೆಯ ಭಾರಿ ಬೆಳಗ್ಗೆ ಹೋಗಿ ಬಂದೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಕಂದಾಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿಗಳು ಅವಿದ್ಯಾವಂತರಾಗಿರುವುದರಿಂದ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-9 ಅನ್ನು ಸೃಷ್ಟಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಕ್ಕೆ 1 ನೇ ಪ್ರತಿವಾದಿ ಸಿದ್ಧಮಲ್ಲಯ್ಯ ಎಂದು ಬರೆಯುತ್ತಾರೆ. ನಿಪಿ-9 ಕ್ಕೆ 1 ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ ಸಿದ್ಧಮಲ್ಲಯ್ಯ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹೆಬ್ಬೆಟ್ಟು ಮತ್ತು ಸಹಿ ಎರಡನ್ನು ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಳಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**